ಗಮನ ಬೇರೆಡೆ ಹರಿಸಲು ಪ್ರಯತ್ನ ಮಾಡಿದರು. ಊಹೂಂ, ಲವೀನಾ ಮಿಸುಕಾಡಲಿಲ್ಲ... ಪೊರ್ಬುಗಳು ಬಿಟ್ಟ ಕಣ್ಣುಗಳಿಂದ ಅವರನ್ನು ನೋಡುತ್ತಿದ್ದ ಜನ್ನುವನ್ನು 'ಬಾ ಮರಿ, ಹಣ್ಣು ತಿಂತೀಯಾ? ನಿಂಗೆ ಯಾವ ಹಣ್ಣು ಇಷ್ಟವೋ?' ಅಂತ ಕೇಳುತ್ತಾ ಎತ್ತಿ ಒಳಗೆ ಕರಕೊಂಡು ಹೋದರು. ಜನ್ನುವೋ ಮೊದಲು ಅವರ ಎತ್ತರ-ಗಾತ್ರ ನೋಡಿ ಹೆದರಿ ಆಮೇಲೆ ಮೀನ ವಾಸನೆಗೆ ಮುಖ ಸಿಂಡರಿಸಿದವನು, ಅವರ ಮೃದು ಮಾತುಗಳಿಗೆ ಸೋತುಬಿಟ್ಟ. ಯಾವತ್ತೂ ಅಜ್ಜಿಯ ಮುಸುರೆ, ಮಡಿ, ಮೈಲಿಗೆಗಳಿಗೆ ಸಿಲುಕಿದವನು ಅಮ್ಮಮ್ಮ ಮನೆಯ ಅಜ್ಜನನ್ನು ತುಂಬಾ ಪ್ರೀತಿಸುತ್ತಿದ್ದ. ಆದರೆ ಅಲ್ಲಿಗೆ ಅಮ್ಮ ಕರಕೊಂಡು ಹೋಗುತ್ತಿದ್ದದ್ದೇ ಕಡಿಮೆ. 'ಈ ಅಜ್ಜ ಎಷ್ಟು ಚಂದ ಇದ್ದಾರೆ, ಅಮ್ಮಮ್ಮ ಮನೆ ಅಜ್ಜ ಥರಾ, ಚೆಂದ ಮಾತಾಡ್ತಾರೆ, ಅಲ್ಲದೆ ನಂಗಿಷ್ಟದ ಹಣ್ಣೂ ಕೊಡ್ತಾರೆ ಅಂತೆ!' ನಮ್ಮ ಪುಟ್ಟ ಜನ್ನು ಅವರ ಕೊರಳ ಸುತ್ತ ಕೈ ಬಳಸಿದ! ಅಪ್ಪ-ಅಜ್ಜಿ ಬಿಡಿ, ಅಮ್ಮನ ನೆನಪೂ ಹಾರಿ ಹೋಯ್ತು ಈ ಚೆಂದದ ಅಜ್ಜನ ಅಕ್ಕರೆಯಲ್ಲಿ! 'ಅಜ್ಜಾ! ಇದು ನಿಮ್ಮದೇ ಮನೆಯಾ? ಯಾರೆಲ್ಲಾ ಇದ್ದಾರೆ ಇಲ್ಲಿ? ಶಣ್ಣ ಬಾಬು ಉಂಟಾ ನಿಮ್ಮನೇಲಿ? ನಾಯಿ ಉಂಟಾ? ಬೆಕ್ಕು ಉಂಟಾ? ತಿಮ್ಮು ಮನೇಲಿ ರಾಜು ನಾಯಿ ಇದ್ದಾನೆ, ಅಂವ ನಂಗೆ ಎಂಥದ್ದೂ ಮಾಡಲ್ಲ ಗೊತ್ತಾ?' ಎಂದೆಲ್ಲಾ ಪ್ರಶ್ನೆಗಳ ಮಳೆ ಸುರಿಸಿದ. ಅಜ್ಜ ನಗುತ್ತಾ ನಿಧಾನವಾಗಿ ಅವನನ್ನೊಮ್ಮೆ ಮೇಲಕ್ಕೆತ್ತಿ ಎಸೆದು ಮತ್ತೆ ಹಿಡಿದು ಅವನನ್ನು ನಗಿಸಿದರು, ಅವನ ಕೆನ್ನೆಯನ್ನೊಮ್ಮೆ ಮೃದುವಾಗಿ ಹಿಂಡಿ, 'ಹೌದು ಪುಟ್ಟ, ನಮ್ಮದೇ ಮನೆ, ನೀನು ಇಲ್ಲೇ ಇರ್ತೀಯಾ? ನಮ್ಮ ಮನೇಲಿ ನಿನ್ನ ಥರಾ ಸಣ್ಣ ಬಾಬು ಯಾರೂ ಇಲ್ಲ ಮಾರಾಯ, ನೀನಿದ್ದರೆ ನಾಯಿ, ಬೆಕ್ಕು ಎಲ್ಲಾ ತರುವಾ ಆಯ್ತಾ?' ಎಂದು ಅವನಿಗುತ್ತರಿಸಿ ಅಲ್ಲೇ ಒಳಮನೆಯಲ್ಲಿದ್ದ ಬುಟ್ಟಿಯಲ್ಲಿದ್ದ ಕಿತ್ತಳೆ ಮತ್ತು ಬಾಳೆಹಣ್ಣು ಕೊಟ್ಟು ಅವನ ಪುಟ್ಟ ಕೈ ತುಂಬಿದರು. ಜನ್ನು ಪೂರ್ತಿ ಖುಷಿಯಾದ!' ನನ್ನ ಅಮ್ಮ ಇದ್ದಾಳಲ್ಲಾ, ಯಾವಾಗಲೂ ಎರಡು ಸೋಳೆ ಕಿತ್ತಳೆ ಹಣ್ಣು ಕೊಡುತ್ತಾಳೆ, ಇನ್ನೂ ಕೇಳಿದರೆ, ಶೀತ ಕಂದಾ, ಬೇಡಮ್ಮ ಸಾಕು ಅಂತಾಳೆ... ಇವತ್ತು ಇಡೀ ಹಣ್ಣು ನಂಗೆ! ಈ ಅಜ್ಜ ಎಷ್ಟು ಒಳ್ಳೆಯವರು' ಅನಿಸಿ ಬಾಗಿ ಅಜ್ಜನ ಮುಖಕ್ಕೆ ಮುತ್ತು ಕೊಟ್ಟ. 'ಬಾಳೆಹಣ್ಣು ಮನೆಯಲ್ಲಿ ಯಾವತ್ತೂ ಇರುತ್ತೆ, ಬೇಕಾದ್ರೆ ತೋಟಕ್ಕೆ ಹೋದ್ರೂ ಸಿಗುತ್ತೆ' ಅಂತ ಯೋಚಿಸಿ ಕೈಯಲ್ಲಿದ್ದ ಕಿತ್ತಳೆ ಮುಂದೆ ಬಾಳೆಹಣ್ಣು ಸಾಮಾನ್ಯ ಅನಿಸಿ ಅದನ್ನು ಧಾರಾಳವಾಗಿ ವಾಪಾಸು ನೀಡಿದ.

ಅಜ್ಜ ಅದನ್ನು ಎತ್ತಿಟ್ಟು ಅವನನ್ನು ಅಡುಗೆ ಮನೆಗೆ ಹೊತ್ತೊಯ್ದರು, ಅಲ್ಲಿದ್ದ ಡಬ್ಬಗಳಲ್ಲಿ ತಡಕಾಡಿ ಗೇರು ಬೀಜ, ದ್ರಾಕ್ಷಿ ಮತ್ತೊಂದು ಮೈ ಬಣ್ಣದ ವಸ್ತು ಎಲ್ಲವನ್ನು ಒಂದು ಪುಟ್ಟ ತಟ್ಟೆಗೆ ಹಾಕಿ ಅವನ ಕೈಗೆ ಕೊಟ್ಟು ಅವರು ಕೆಳಗೆ ಕೂತು ಅವನನ್ನು ತೊಡೆ ಮೇಲೆ ಕೂಡಿಸಿದರು. ಜನ್ನು ಅಷ್ಟರವರೆಗೆ ಆ ವಿಚಿತ್ರ ವಸ್ತುವನ್ನು ತಿಂದೇ ಇರಲಿಲ್ಲ, ಅದನ್ನೆತ್ತಿ ಪರಿಶೀಲಿಸಿದ, ಏನೋ ಬೀಜದ ತರಹ ಇತ್ತು. ಪಾಪ ಗೊತ್ತಾಗಲಿಲ್ಲ! ಕುತೂಹಲ ತಡೆಯಲಾಗದೆ ಮುಖ ಮೇಲೆತ್ತಿ ಅಜ್ಜನನ್ನ ಕೇಳಿಯೇ ಬಿಟ್ಟ 'ಅಜ್ಜಾ, ಎಂಥ ಇದು, ತಿನ್ನಲ್ಲಿಕ್ಕಾ? ಎಲ್ಲಿಂದ ತಂದಿರಿ?' ಅಂತ! 'ಅದಕ್ಕೆ ಬಾದಾಮಿ ಅಂತಾರೆ, ಅದು ತಿಂದರೆ ನೀನು ತುಂಬಾ ಗಟ್ಟಿಯಾಗುತ್ತೀ, ಅದು ಹೊರದೇಶದಿಂದ ತಂದದ್ದು' ಎಂದರು. ನಗುತ್ತಾ! ಇವನ ಮಾತು ಕಥೆ ನೋಡಿ ಅವರಿಗೆ ಏನೋ ಖುಷಿಯಾಗುತಿತ್ತು, ಅಷ್ಟು ಮುದ್ದು ಹುಡುಗ ಜನ್ನು. ಅಷ್ಟರಲ್ಲಿ ಲವೀನಾ ಒಳ ಬಂದಳು, ಜನ್ನು ಖುಷಿಯಿಂದ ನಗ ಹೊರಟವನು ಅವಳ ಅಳು, ಕೆಂಪಗೆ ಊದಿದ ಮುಖ ಕಂಡು ಗಾಬರಿಯಾದ. 'ಲವೀನಾ, ತಾಯಿ ಅಳಬೇಡಮ್ಮಾ...' ಎಂದ ಪೊರ್ಬುಗಳ ಸ್ವರವೂ ಒದ್ದೆಯಾಗಿತ್ತು. ಅವಳು ತಂದೆಯ ಪಕ್ಕಕ್ಕೆ ಕುಸಿದು ಕುಳಿತವಳು ಕೇಳುವವರ ಮನ ಕರಗುವಂತೆ ದನಿ ತೆಗೆದು ಅಳಲಾರಂಭಿಸಿದಳು. ಅದರೊಂದಿಗೆ ಜನ್ನು ಹಿಮ್ಮೇಳ ಬೇರೆ.

ಅಷ್ಟರಲ್ಲೇ ಹೊರಗಿಂದ ಏನೋ ಸದ್ದಾಂತಾಯಿತು, ಅಳುತ್ತಿದ್ದ ಲವೀನಾಗಾಗಲೀ, ಜನ್ನುವಿಗಾಗಲೀ ಅದರ ಪರಿವೇ ಇರಲಿಲ್ಲ. ಪೊರ್ಬುಗಳು ಅವನನ್ನು ಕೆಳಗೆ ಕೂಡಿಸಿ ಹೊರ ಧಾವಿಸಿದರು, ಅಲ್ಲಿ ನೋಡುತ್ತಾರೆ, ಹೊರ ಬಾಗಿಲ ಬಳಿ ಜನ್ನು ಅಮ್ಮ ಭಾಗೀರಥಿ ಏದುಸಿರು ಬಿಡುತ್ತಾ ಅಸ್ತವ್ಯಸ್ತ ಸೀರೆ, ಕೆದರಿದ ಕೂದಲೊಂದಿಗೆ ನಿಂತಿದ್ದಾಳೆ. ಇವರನ್ನ ನೋಡಿದವಳೇ 'ಸಂಜೆಯಿಂದ ನನ್ನ ಮಗು ಕಾಣುತ್ತಿಲ್ಲ ಪೊರ್ಬುಗಳೇ, ನೀವೇನಾದ್ರೂ ನೋಡಿದ್ರಾ?, ಅವರಪ್ಪ ಎಲ್ಲಾ ಕಡೆ ಹುಡುಕಿಸಿದ್ರು, ತಿಮ್ಮುವನ್ನೂ ಕೇಳಾಯ್ತು, ಅಲ್ಲೂ ಇಲ್ಲವಂತೆ, ನಂಗೆ